# ಸ್ಮಾರಕವೆಲ್ಲೋ, ವೇದಿಕೆ ಎಲ್ಲೋ

ಹಂಪಿಯ ಸೊಬಗು ಇರುವುದೇ ಕಲ್ಲುಗಳಲ್ಲಿ. ಕಲ್ಲಿನ ಸಾಲು ಮಂಟಪಗಳು, ಕಲ್ಲು, ಇಟ್ಟಿಗೆ, ಮಣ್ಣು ಗಾರೆಯಲ್ಲೇ ನಿರ್ಮಿಸಿದಂತಹ ಕಟ್ಟಡಗಳು ನೀಡುವ ಸೊಬಗನ್ನು ಪದಗಳಲ್ಲಿ ವರ್ಣಿಸಲಾಗದು. ದೇವಸ್ಥಾನಗಳಂತೂ ಕಲ್ಲು ಬಿಟ್ಟರೆ ಬೇರೇನನ್ನೂ ಕಂಡಿಲ್ಲ. ಇಂತಹ ಸೊಬಗಿನ ಸ್ಮಾರಕಗಳ ಬೀಡು ಹಂಪಿಯ ಸಹಜ ಸೌಂದರ್ಯ ಇರುವುದೇ ಕಲ್ಲಿನಲ್ಲಿ. ಸಾಲುಕಂಬಗಳು, ಸುತ್ತಮುತ್ತಲಿನ ಬೃಹತ್ ಬಂಡೆಗಳ ನಡುವೆ ಇರುವ ಎದುರು ಬಸವಣ್ಣ ವೇದಿಕೆಯೇ ಬಹುವರ್ಷಗಳ ಕಾಲ ಹಂಪಿ ಉತ್ಸವದ ಪ್ರಧಾನ ವೇದಿಕೆಯಾಗಿತ್ತು. ಹಂಪಿಗೆ ಹಂಪಿಯೇ ಸಾಟಿ ಎಂಬಂತೆ ಇಲ್ಲಿನ ದೃಶ್ಯಕಾವ್ಯ ಮೊಳಗಿರುತ್ತಿತ್ತು. ಜನ ಹೆಚ್ಚು ಸೇರುತ್ತಲೇ, ಸ್ಮಾರಕಗಳಿಗೆ ಧಕ್ಕೆಯಾಗದಿರಲಿ ಎಂಬ ಕಾರಣಕ್ಕೆ ಸಾಸಿವೆಕಾಳು ಗಣೇಶ, ಉಗ್ರನರಸಿಂಹ ಸ್ಮಾರಕಗಳಿಂದ ಸುಮಾರು 300 ಮೀಟರ್ ದೂರದ ಗಾಯತ್ರಿ ಮಂಟಪದ ಸಮೀಪದ ಖಾಲಿ ಸ್ಥಳದಲ್ಲಿ ಮುಖ್ಯ ವೇದಿಕೆ ನಿರ್ಮಿಸುವ ತೀರ್ಮಾನಕ್ಕೆ ಬಂದ ನಂತರ ಸ್ಮಾರಕವೆಲ್ಲೋ, ವೇದಿಕೆಯೆಲ್ಲೋ ಎಂಬಂತಾಗಿದೆ. ಹೀಗಿದ್ದರೂ ಸಾಸಿವೆಕಾಳು ಗಣೇಶ, ಎದುರು ಬಸವಣ್ಣ, ವಿರೂಪಾಕ್ಷೇಶ್ವರ ದೇವಸ್ಥಾನದ ಆವರಣ ಹಾಗೂ ಮಹಾನವಮಿ ದಿಬ್ಬದ ಬಳಿ ಹಂಪಿ ಉತ್ಸವದ ವೇಳೆ ವೇದಿಕೆಗಳನ್ನು ನಿರ್ಮಿಸಿ, ಅಲ್ಲಿ ಕಲಾವಿದರಿಗೆ ಅವಕಾಶ ನೀಡಲಾಗುತ್ತಿದೆ. ದೊಡ್ಡ ದೊಡ್ಡ ಕಲಾವಿದರೆಲ್ಲ ಗಾಯತ್ರಿ ಪೀಠ ಸಮೀಪದ ಪ್ರಧಾನ ವೇದಿಕೆಯಲ್ಲಷ್ಟೇ ಕಾರ್ಯಕ್ರಮ ನೀಡುವುದರಿಂದ ಉಳಿದ ವೇದಿಕೆಗಳ ಬಳಿ ಜನ ಸೇರುತ್ತಿಲ್ಲ. ಈ ಬಾರಿಯಾದರೂ ಇಂತಹ ತಾರತಮ್ಯ ತಪ್ಪಿಸಿ ಎಂಬ ಕೂಗು ಕಲಾವಿದರ ವಲಯದಿಂದ ಕೇಳಿಬಂದಿದೆ.





ಉತ್ಸವಕ್ಕೆ ಕಳೆಗಟ್ಟುವ ಕುಸ್ತಿ

ಫೆಬ್ರುವರಿ 13ರಿಂದ 15ರವರೆಗೆ ನಡೆಯಲಿರುವ ಈ ಬಾರಿಯ ಹಂಪಿ ಉತ್ಸವ 29ನೇ ವರ್ಷದ್ದು.

ವಿರೂಪಾಕ್ಷನ ಹೆಸರಲ್ಲೇ ಆಡಳಿತ, ಅವನ ಹೆಸರಲ್ಲೇ ಸಾಹಿತ್ಯ ರಚನೆಯಂತಹ ಅತ್ಯಂತ ಅಪರೂಪದ ಪ್ರಸಂಗಗಳ ನೆಲೆಯಾಗಿರುವ ಇದು ಮಾತಂಗ ಕವಿಯ ಊರು. ಐದನೇ ಶತಮಾನದಲ್ಲಿ ಆತ ರಚಿಸಿದ ಸಂಗೀತಶಾಸ್ತ್ರ ಕುರಿತಾದ 'ಬೃಹದ್ದೇಶಿ' ಕೃತಿಯಿಂದ ತೊಡಗಿ ಕನಕ, ಪುರಂದರ ದಾಸರ ದಾಸ ಸಾಹಿತ್ಯದವರೆಗೆ, ಹರಿಹರನ ರಗಳೆಯಿಂದ ತೊಡಗಿ ನೂರಾರು ವಿರಕ್ತರಿಂದ ವಚನ ಸಾಹಿತ್ಯದ ಸಂರಕ್ಷಣೆವರೆಗೆ ಹಂಪಿ ಎಂಬುದು ವಿಶಿಷ್ಟ ರೀತಿಯಲ್ಲಿ ಸಾಹಿತ್ಯವನ್ನು ಪೋಷಿಸಿದ ನೆಲವಾಗಿತ್ತು. ದೇಶದ ಇತಿಹಾಸದಲ್ಲಿ ಗರಿಷ್ಠ ಸಾಹಿತ್ಯ ಕೃಷಿ ನಡೆದುದು ಗುಪ್ತರ ಕಾಲದಲ್ಲಿ, ನಂತರದ ಸ್ಥಾನದಲ್ಲಿದೆ ವಿಜಯನಗರ. ಉಳಿದ ಯಾವ ರಾಜರ ಕಾಲದಲ್ಲೂ ಇಷ್ಟೊಂದು ಸಾಹಿತ್ಯ ಚಟುವಟಿಕೆಗಳು ನಡೆದಿಲ್ಲ ಎಂಬುದು ವಿದ್ವಾಂಸರ ಅಭಿಮತ. ಸಾವಿರಾರು ಕವಿಗಳು, ಸಾಹಿತಿಗಳು, ವಚನಕಾರರು, ದಾಸವರೇಣ್ಯರು ಓಡಾಡಿದ ಈ ನೆಲದಲ್ಲಿನ ಹಂಪಿ ಉತ್ಸವಕ್ಕೆ ವಿಶೇಷ ಮಹತ್ವ ಇದ್ದೇ ಇದೆ.

ಹಂಪಿ ಬೆಳಕಿಗೆ ಬಂದುದು 1970ರ ನಂತರ: ಹಂಪಿ ಮೂರೂವರೆ ಶತಮಾನಗಳ ಕಾಲ ಜಗತ್ತಿನ ಕಣ್ಣು ಕೋರೈಸಿತ್ತು, ಆದರೆ 'ಹಾಳುಹಂಪಿ'ಯಾದ ಬಳಿಕ ಸುಮಾರು ಮೂರು ಶತಮಾನಗಳ ಕಾಲ ಬಹುತೇಕ ಕಗ್ಗತ್ತಲೆಯಲ್ಲೇ ಕಳೆದಿತ್ತು. 1970ರಲ್ಲಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಹಂಪಿಯ ಕಮಲಮಹಲ್ ಬಳಿ 'ಪ್ರವಾಸಿ ಉತ್ಸವ' ಹೆಸರಿನಲ್ಲಿ ಉತ್ಸವ ಆಚರಿಸಿದ ಬಳಿಕ ಹಂಪಿ ಎಂಬ ಅದ್ಭುತ ತಾಣ ಇದೆ ಎಂಬುದು ಜಗತ್ತಿಗೆ ಗೊತ್ತಾಯಿತು. ಆಗಲೇ ರಂಗಭೂಮಿ, ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಎಂ.ಪಿ. ಪ್ರಕಾಶ್ ಅವರು ಹಂಪಿ ಬಗ್ಗೆ ಗಾಢವಾಗಿ ಚಿಂತಿಸಲು ಆರಂಭಿಸಿದ್ದರು. 1986ರಲ್ಲಿ ಹಂಪಿ 'ಯುನೆಸ್ಕೊ' ವಿಶ್ವ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಯಿತು. ಬಳಿಕ ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರಲಾರಂಭಿಸಿದರು.

ಕನಕ ಪುರಂದರ ಉತ್ಸವ: 1987ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಎಂ.ಪಿ. ಪ್ರಕಾಶ್ ಅವರು 'ಕನಕ ಪುರಂದರ ಉತ್ಸವ' ಹೆಸರಿನಲ್ಲಿ ಹಂಪಿ ಉತ್ಸವಕ್ಕೆ ಮುನ್ನುಡಿ ಬರೆದರು. ಜಿಲ್ಲಾ ಮಟ್ಟದಲ್ಲಿ ಆರಂಭಿಸಿದ ಉತ್ಸವ ಮರು ವರ್ಷ 'ವಿಜಯನಗರ ವೈಭವ' ಹೆಸರಲ್ಲಿ ಆಚರಣೆಗೆ ಸಜ್ಜಾಗಿತ್ತು. ಅದ್ದೂರಿಯಾಗಿ ಉತ್ಸವದ ಉದ್ಘಾಟನೆಯೂ ನಡೆದಿತ್ತು. ಕೆಲ ಗಂಟೆಗಳಲ್ಲಿ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್ ಅವರ ನಿಧನದ ಕಾರಣ ಉತ್ಸವ ರದ್ದುಗೊಂಡಿತು. 1989ರಿಂದ 1993ರವರೆಗೆ ನಾನಾ ಕಾರಣಗಳಿಗೆ ಹಂಪಿ ಉತ್ಸವ ನಡೆಯಲಿಲ್ಲ. 1994ರಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಂಪಿ ಉತ್ಸವಕ್ಕೆ ಮರುಜೀವ ಸಿಕ್ಕಿತು. ಬಜೆಟ್‌ನಲ್ಲೇ ಅನುದಾನ ಒದಗಿಸಲಾಯಿತು. ಪ್ರತಿ ವರ್ಷ ನವೆಂಬರ್ 3, 4 ಮತ್ತು 5ನೇ ತಾರೀಖಿಗೆ ಉತ್ಸವ ನಿಗದಿಪಡಿಸಿ ರಾಜ್ಯಪತ್ರವನ್ನೂ ಹೊರಡಿಸಲಾಯಿತು. 1999ರವರೆಗೆ ನಡೆದ ಹಂಪಿ ಉತ್ಸವಗಳು ಮಾಡಿದ ಮೋಡಿ ಅದ್ಭುತ. ಹಲವು ವಿದೇಶಿ ಕಲಾ ತಂಡಗಳೂ ಇಲ್ಲಿ ಕಾರ್ಯಕ್ರಮ ನೀಡಿದ್ದವು. ಶಾಸ್ತ್ರೀಯ ಸಂಗೀತ, ನೃತ್ಯಕ್ಕೆ ಹಾಗೂ ಜಾನಪದ ಕಲೆಗಳಿಗೆ ಬಹಳಷ್ಟು

